

# ಹುಳಿಚಿಟ್ಲೆ ಹಣ್ಣು

■ ಚಿತ್ರ ಬರಹ:
**ದೇವರು ಆರ್. ಭಟ್ಟ**





ಅಳಿವಿನಂಚಿನಲ್ಲಿರುವ ಹಣ್ಣುಗಳಲ್ಲಿ ಹುಳಿಚಿಟ್ಲೆ ಹಣ್ಣೂ ಒಂದು. ಇದನ್ನು ಹುಳಿ ಮಜ್ಜಿಗೆ ಹಣ್ಣು ಎಂದೂ ಕರೆಯುತ್ತಾರೆ. ಪೊದೆಯಂತೆ ಬೆಳೆಯುವ ಈ ಗಿಡ, ಬಳ್ಳಿಯಂತೆ ಬೇರೆ ಮರ ಗಿಡಗಳ ಆಸರೆಯಿಂದ ಮೇಲೆದ್ದು ಬರುತ್ತದೆ. ಗಡುಸಾದ ಬಳ್ಳಿಯಂತೇ ತೋರುತ್ತದೆ. ಬಳ್ಳಿಯ ತುದಿಗಳಲ್ಲಿ ಸುಮಾರು ಮುಕ್ಕಾಲು ಇಂಚು ಅಗಲದ ಎರಡಿಂಚು ಉದ್ದದ ಚೂಪು ಚೂಪಾದ ದಪ್ಪ ಎಲೆಗಳನ್ನು ಹೊಂದಿರುತ್ತದೆ. ಬೇರೆ ಮರಗಳನ್ನು ಆಶ್ರಯಿಸಿ ಹಬ್ಬವುದರಿಂದ ಇದರ ಎಲೆಗಳನ್ನು ಪ್ರತ್ಯೇಕಿಸಿ ಗುರುತಿಸುವುದು ಸ್ವಲ್ಪ ಕಷ್ಟ.

ನೋಡಲು ರಂಜಲ ಕಾಯಿಯನ್ನೇ ಹೋಲುವ ಇದು ಗೊಂಚಲು ಗೊಂಚಲಾಗಿ ಬಿಡುತ್ತದೆ. ಮೂರು ಪದರುಗಳ ಈ ಹಣ್ಣಿನ ಮೊದಲ ಪದರು ಸಿಪ್ಪೆಯನ್ನು ಬಿಡಿಸಿದಾಗ ಇದು ಒಳಗಿನ ಹಣ್ಣಿನ ಭಾಗಕ್ಕೆ ಅಂಟಿಕೊಳ್ಳದೇ ಕೇವಲ ತೊಟ್ಟಿನ ಬುಡದಲ್ಲಿ ಮಾತ್ರ ಅಂಟಿಕೊಂಡಿರುತ್ತದೆ. ನಂತರ ತೆಳುವಾದ ಪೊರೆ ಚೀಲದಲ್ಲಿ ತುಂಬಿದಂತೆ ಕಾಣುವ ಹಣ್ಣಿನ ತಿರುಳು ಬಿಳಿದಾದ ಬೀಜದ ಸುತ್ತಲೂ ಹರಡಿಕೊಂಡಿರುತ್ತದೆ. ಇದೂ ಸಹ ಬೀಜಭಾಗಕ್ಕೂ ತೊಟ್ಟಿನ ಬುಡದಲ್ಲಿ ಮಾತ್ರ ಅಂಟಿಕೊಂಡಿದ್ದು ಬೀಜದ ಹೊರಮೈಗೆ ಅಂಟಿಕೊಂಡಿರು- ವುದಿಲ್ಲ. ಹೀಗೆ ಮೂರೂ ಪದರುಗಳು ತೊಟ್ಟಿನ ಬುಡದಲ್ಲಿ ಬಿಟ್ಟರೆ ಮತ್ತೆಲ್ಲೂ ಒಂದಕ್ಕೊಂದು ಅಂಟಿಕೊಳ್ಳದೇ ಕೇವಲ ಹೊದಿಕೆಯಂತೆ ಇರುತ್ತವೆ.

ಹಣ್ಣಿನ ಹೆಸರೇ ಹೇಳುವಂತೆ ಹುಳಿಯಾದ ರಸ. ತಂಪು ಪಾನೀಯಗಳ 'ಎಸೆನ್ಸ್'ನಂತೆ ಇದ್ದು ತೆಳುವಾದ ಪೊರೆಯಲ್ಲಿ ತುಂಬಿಕೊಂಡಿರುತ್ತದೆ. ಬಾಯಿಗೆ ಹಾಕಿ ಕೇವಲ ನಾಲಿಗೆಯಿಂದ ಅದುಮಿದರೆ ಸಾಕು ಹುಳಿ ಹುಳಿ ರಸ ಹೊರಬರುತ್ತದೆ. ಸಾಮಾನ್ಯವಾಗಿ ಮೇ ತಿಂಗಳಲ್ಲಿ ಹಸಿರಾಗಿದ್ದ ಕಾಯಿಗಳು ಬಂಗಾರದ ಬಣ್ಣಕ್ಕೆ ತಿರುಗಿ ಮಾಗಿದ ಹಣ್ಣಾಗಿರುತ್ತವೆ. ಕಾಯಿಯಾಗಿದ್ದಾಗ ಒಳಗಿನ ತಿರುಳು ಹಳದಿ ಬಣ್ಣದಲ್ಲಿದ್ದು ಹಣ್ಣಾದಾಗ ಕೇಸರಿ ಬಣ್ಣಕ್ಕೆ ಬದಲಾಗಿ ಪಾರದರ್ಶಕವಾಗಿ ಕಾಣುತ್ತದೆ. ಹುಳಿಚಿಟ್ಲೆ ಹಣ್ಣು ಎಂದಾಕ್ಷಣ ಅದರ ರುಚಿ ಗೊತ್ತಿದ್ದವರ ಬಾಯಲ್ಲಿ ನೀರೂರುವುದಂತೂ ಖಂಡಿತ. ಇದು ಹೆಣ್ಣುಮಕ್ಕಳ ಅಚ್ಚುಮೆಚ್ಚಿನ ಹಣ್ಣು ಎನ್ನುವುದು ಒಂದು ವಿಶೇಷ.